ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:- DCE/BUD/GCC/1/2023

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:08.11.2023 18

**ಇವರಿಗೆ,**

**ಕಾಲೇಜು ಶಿಕ್ಷಣ ಇಲಾಖಾ**
**ವ್ಯಾಪ್ತಿಯ ಎಲ್ಲಾ ಡಿಡಿಓಗಳಿಗೆ**

ಮಾನ್ಯರೆ,

ವಿಷಯ:- ಕಾಲೇಜು ಶಿಕ್ಷಣ ಇಲಾಖಾ ವೆಚ್ಚಗಳನ್ನು ಖಜಾನೆ-2ರಲ್ಲಿ ಲೆಕ್ಕ ಸಮನ್ವಯೀಕರಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ:01:ಟಿ.ಎಫ್.ಸಿ:2021, ದಿನಾಂಕ:29.10.2021
2. ಈ ಕಛೇರಿಯ ಸುತ್ತೋಲೆ ದಿನಾಂಕ:15.11.2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(01) ಮತ್ತು (02)ರ ಸುತ್ತೋಲೆಗಳಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳು ಪ್ರತಿ ಮಾಹೆವಾರು ಭರಿಸುವ ವೆಚ್ಚಗಳ 62(ಬಿ)ವರದಿಯನ್ನು ನಿಯಮಾನುಸಾರ ಪರಿಶೀಲಿಸಿ ಖಜಾನೆ-2ರಲ್ಲಿ ಸಮನ್ವಯೀಕರಿಸಲು ಅವಕಾಶವಿರುತ್ತದೆ. ಅದರಂತೆ, ವೆಚ್ಚಗಳ ಸಮನ್ವಯೀಕರಣ ನಮೂನೆಗಳು/ವರದಿಗಳನ್ನು **K-2 DDO LOGIN**ನಲ್ಲಿ **RECONCILIATION** ಆಯ್ಕೆ ಮಾಡಿ ಲೆಕ್ಕ ಸಮನ್ವಯವನ್ನು ಪ್ರತೀ ಮಾಹೆಯ 10ನೇ ತಾರೀಖಿನ ಒಳಗಾಗಿ ಬಳಕೆ ಅನುದಾನದ ವಿವರಗಳನ್ನು ಖಜಾನೆ-2ರಡಿ **VERIFY & APPROVE** ಮಾಡುವಂತೆ ಸೂಚಿಸಲಾಗಿರುತ್ತದೆ.

ಅದರಂತೆ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಡಿಡಿಓಗಳು ಖಜಾನೆ-2ರಡಿ ಪ್ರತೀ ಮಾಹೆ ಲೆಕ್ಕ ಸಮನ್ವಯೀಕರಿಸದೇ ಅನುದಾನ ಬಳಕೆ ಮಾಡುತ್ತಿರುವುದು ಕಂಡುಬಂದಿರುವ ಪ್ರಯುಕ್ತ ತುರ್ತಾಗಿ ಅನುದಾನ ಬಳಕೆ ವಿವರಗಳನ್ನು **K-2 DDO LOGIN**ನಲ್ಲಿ **RECONCILIATION** ಮಾಡುವಂತೆ ಸೂಚಿಸಲಾಗಿದೆ ತಪ್ಪಿದ್ದಲ್ಲಿ ಸಂಬಂಧಪಟ್ಟ **DDO**ಗಳ ಮತ್ತು ಸಂಬಂಧ ಪಟ್ಟ ಸಿಬ್ಬಂದಿಗಳ ವೇತನ ತಡೆಹಿಡಿದು ನಿಯಮಾನುಸಾರ ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಲಾಗುವುದು.

ತಮ್ಮ ವಿಶ್ವಾಸಿ

**ಕಾಲೇಜು ಶಿಕ್ಷಣ ನಿರ್ದೇಶಕರು**

ಪ್ರತಿಗಳನ್ನು:-

1. ಮ್ಯಾನೇಜರ್/ಅಧೀಕ್ಷಕರು, ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ, ಬೆಂಗಳೂರು –ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2. ಮ್ಯಾನೇಜರ್/ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು- ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ
3. ಕಛೇರಿ ಪ್ರತಿ

ತನಿಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 24 ಟಿಎಆರ್ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:04.07.2023

ಸುತ್ತೋಲೆ

ವಿಷಯ:- ಇಲಾಖಾ ಜಮೆ ಮತ್ತು ವೆಚ್ಚಗಳ ಕುರಿತು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

*******

ಮಹಾಲೇಖಪಾಲರು ಅರೆ ಸರ್ಕಾರಿ ಪತ್ರ ದಿನಾಂಕ:19.04.2023ರಲ್ಲಿ ಬಾಕಿ ಇರುವ ಎ.ಸಿ.ಬಿಲ್ಲುಗಳಿಗೆ NDC ಬಿಲ್ಲುಗಳನ್ನು ಕೂಡಲೇ ಸಲ್ಲಿಸಲು, ಸಹಾಯಾನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವಂತೆ ಹಾಗೂ ಕಾಲಕಾಲಕ್ಕೆ ಲೆಕ್ಕಹೊಂದಾಣಿಕೆ ಮಾಡುವಂತೆ ಸೂಚಿಸಿರುತ್ತಾರೆ.

**ಎ.ಸಿ. ಬಿಲ್ಲುಗಳ ಮೇಲೆ ಸೆಳೆದಿರುವುದಕ್ಕೆ NDC ಬಿಲ್ಲು ಸಲ್ಲಿಸದಿರುವುದು:**

ಮಹಾಲೇಖಪಾಲರು ಅರೆ ಸರ್ಕಾರಿ ಪತ್ರ ದಿನಾಂಕ: 19.04.2023ರಲ್ಲಿ, ಜನವರಿ-2023ರ ಅಂತ್ಯಕ್ಕೆ **ಒಳಾಡಳಿತ ಇಲಾಖೆಯ ರೂ.**33.13 **ಕೋಟಿಗಳ** 405 NDC **ಬಿಲ್ಲುಗಳು, ಸಿ.ಆ.ಸು.ಇಲಾಖೆಯ (ಚುನಾವಣೆಗಳು) ರೂ.**30.22 **ಕೋಟಿಗಳ** 184 NDC **ಬಿಲ್ಲುಗಳು ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ರೂ.**6.27 **ಕೋಟಿಗಳ** 78 NDC **ಬಿಲ್ಲುಗಳು ಒಟ್ಟು ರೂ.**79.24**ಕೋಟಿಗಳ** 1559 **ಎ.ಸಿ. ಬಿಲ್ಲುಗಳು** ಬಾಕಿ ಇರುವುದಾಗಿ ಆಕ್ಷೇಪಿಸಿರುತ್ತಾರೆ.

ಬಾಕಿ ಇರುವ ಎ.ಸಿ.ಬಿಲ್ಲುಗಳ ವಿವರಗಳನ್ನು ಮಹಾಲೇಖಪಾಲರಿಂದ ಪಡೆದು ಸಂಬಂಧಪಟ್ಟ ಇಲಾಖೆಗಳು ಒಂದು ತಿಂಗಳೊಳಗಾಗಿ ಇವುಗಳನ್ನು ಇತ್ಯರ್ಥಗೊಳಿಸುವಂತೆ ತಿಳಿಸಿದೆ.

**ಸಹಾಯಾನುದಾನ ಪಡೆದ ಬಗ್ಗೆ UC ಸಲ್ಲಿಸದಿರುವುದು:**

ಜನವರಿ-2023ರ ಅಂತ್ಯಕ್ಕೆ **ವೈದ್ಯಕೀಯ ಇಲಾಖೆಯ ರೂ.**166.24 **ಕೋಟಿಗಳ** 56 **ಬಿಲ್ಲುಗಳು ಮತ್ತು ಕ್ರೀಡೆ ಮತ್ತು ಯುವಸೇವೆ ಇಲಾಖೆಯ ರೂ.**29.69 **ಕೋಟಿಗಳ** 34 **ಬಿಲ್ಲುಗಳು ಒಟ್ಟು ರೂ.**195.93**ಕೋಟಿಗಳ** 90 ಸಹಾಯಾನುದಾನ ಬಿಲ್ಲುಗಳಿಗೆ ಹಣಬಳಕೆ ಪ್ರಮಾಣ ಪತ್ರ ಒದಗಿಸುವುದು ಬಾಕಿ ಇರುವುದಾಗಿ ಆಕ್ಷೇಪಿಸಿರುತ್ತಾರೆ.

ಆದ್ದರಿಂದ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಹಣ ಸೆಳೆಯುವ ಅಧಿಕಾರಿಗಳಿಗೆ ಸಹಾಯಾನುದಾನವನ್ನು ಉಪಯೋಗಿಸಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಕೂಡಲೆ ಖಜಾನೆ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸುವಂತೆ ಸೂಚನೆ ನೀಡುವಂತೆ ತಿಳಿಸಿದೆ.

6/7/2023

**ಲೆಕ್ಕ ಹೊಂದಾಣಿಕೆ:**

ಜನವರಿ-2023ರ ಅಂತ್ಯಕ್ಕೆ 82.57%ರಷ್ಟು ಜಮೆಗಳು (Receipts) ಮತ್ತು 70.80%ರಷ್ಟು ಮಾತ್ರ ವೆಚ್ಚಗಳ (Expenditure) ಲೆಕ್ಕಹೊಂದಾಣಿಕೆ ಮಾಡಿರುವುದಾಗಿ, ಹಾಗೂ ಜಮೆ ಮತ್ತು ವೆಚ್ಚಗಳ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ CCO ಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಮಹಾಲೇಖಪಾಲರ ದಿನಾಂಕ:19.04.2023ರ ಪತ್ರದಲ್ಲಿ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. (ಲಗತ್ತಿಸಿದೆ)

ಆದ್ದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಸಿ 2021, ದಿನಾಂಕ: 29.10.2021ರಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ CO/CCO/DDO ಗಳು ಲೆಕ್ಕ ಹೊಂದಾಣಿಕೆ ಮಾಡುವಂತೆ ಎಲ್ಲಾ ಇಲಾಖೆಗಳಿಗೆ ನಿರ್ದೇಶನ/ಸೂಚನೆಗಳನ್ನು ತಪ್ಪದೇ ನೀಡುವುದು.

ಮೇಲೆ ತಿಳಿಸಿದಂತೆ, ತಮ್ಮ ವ್ಯಾಪ್ತಿಯಡಿ ಬರುವ ಮುಖ್ಯ ನಿಯಂತ್ರಣಾಧಿಕಾರಿಗಳಿಗೆ/ ನಿಯಂತ್ರಣಾಧಿಕಾರಿಗಳಿಗೆ ಬಾಕಿ ಎ.ಸಿ.ಬಿಲ್ಲುಗಳಿಗೆ NDC ಬಿಲ್ಲುಗಳನ್ನು ಸಲ್ಲಿಸುವಂತೆ, ಸಹಾಯಾನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವಂತೆ ಹಾಗೂ ನಿಯಮಿತವಾಗಿ ಲೆಕ್ಕ ಹೊಂದಾಣಿಕೆ ಮಾಡುವಂತೆ ಸೂಚನೆ ನೀಡಲು ಕೋರಲಾಗಿದೆ. ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರು ತಮ್ಮ ವ್ಯಾಪ್ತಿಯ ಇಲಾಖೆಗಳಿಂದ ಈ ಬಗ್ಗೆ ಕ್ರಮ ಕೈಗೊಂಡಿರುವ ಕುರಿತು ಕ್ರೋಢೀಕೃತ ವರದಿ ಪಡೆದು ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಆದಾಗ್ಯೂ ಮತ್ತದೇ ನ್ಯೂನ್ಯತೆಗಳು ಮರುಕಳಿಸಿದರೆ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

(ನಿತೇಶ್.ಕೆ.)
ಸರ್ಕಾರದ ಉಪ ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ

ಇವರಿಗೆ:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

2) ಎಲ್ಲಾ ಇಲಾಖಾ ಮುಖ್ಯಸ್ಥರು/ನಿಯಂತ್ರಣಾಧಿಕಾರಿಗಳು

3) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು

ಪ್ರತಿ ಮಾಹಿತಿಗಾಗಿ

1) ಪ್ರಧಾನ ಮಹಾಲೇಖಪಾಲರು (ಎ&ಇ) ಮತ್ತು (ಆಡಿಟ್), ಕರ್ನಾಟಕ ಬೆಂಗಳೂರು.

2) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು.

ಉಲ್ಲೇಖ
30-9-23

ಕರ್ನಾಟಕ ಸರ್ಕಾರ

ಸಂಖ್ಯೆ: ಶಿಇ 91 ಐಎಫ್‌ಬಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19.09.2023.

**ಇವರಿಂದ,**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬಹುಮಹಡಿ ಕಟ್ಟಡ, ಬೆಂಗಳೂರು.

**ಇವರಿಗೆ,**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಆಡಳಿತಾಧಿಕಾರಿಗಳು, ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ), ನಂ. 8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-32.
3. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಕಲಬುರ್ಗಿ ಮತ್ತು ಧಾರವಾಡ.

**ಮಾನ್ಯರೇ,**

ವಿಷಯ: ಇಲಾಖಾ ಜಮೆ ಮತ್ತು ವೆಚ್ಚಗಳ ಕುರಿತು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಸಮ ಸಂಖ್ಯೆಯ ಪತ್ರ ದಿನಾಂಕ 13.07.2023.
2. ಮಹಾಲೇಖಪಾಲರು(A&E), ಕರ್ನಾಟಕ, ಬೆಂಗಳೂರು ಇವರ ಪತ್ರ ಸಂಖ್ಯೆ AG(A&E)/VLCIX/Recon/153, ದಿನಾಂಕ 07.09.2023.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯು ಇಲಾಖಾ ಜಮೆ ಮತ್ತು ವೆಚ್ಚದ ಹೊಂದಾಣಿಕೆ, ಸವಿವರ ಸಾದಿಲ್ವಾರು ಬಿಲ್ಲುಗಳು (ಎ.ಸಿ. ಬಿಲ್ಲುಗಳ ಮೇಲೆ ಎನ್.ಡಿ.ಸಿ. ಬಿಲ್ಲುಗಳ ಸಲ್ಲಿಸುವಿಕೆ) ಹಾಗೂ ಸಹಾಯಾನುದಾನ ಪಡೆದ ಬಗ್ಗೆ ಉಪಯೋಗಿತ ಪ್ರಮಾಣ ಪತ್ರ (UC) ಸಲ್ಲಿಸುವಿಕೆ ಕುರಿತು ಸೂಕ್ತ ನಿರ್ದೇಶನವನ್ನು ನೀಡಿದ್ದು. ಅದರಂತೆ ಮುಂದಿನ ಕ್ರಮವಹಿಸಲು ಉಲ್ಲೇಖ(1)ರ ಪತ್ರದಲ್ಲಿ ಕೋರಲಾಗಿತ್ತು.

ಉಲ್ಲೇಖ(2)ರ ಪತ್ರದಲ್ಲಿ ಮಹಾಲೇಖಪಾಲರು ಇಲಾಖಾ ಜಮೆ ಮತ್ತು ವೆಚ್ಚದ ಹೊಂದಾಣಿಕೆ ಮಾಡಿರದ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಏಪ್ರಿಲ್-2023 ರಿಂದ ಆಗಸ್ಟ್- 2023 ರವರೆಗಿನ ಎಲ್ಲಾ ಇಲಾಖಾ ಜಮೆ ಮತ್ತು ವೆಚ್ಚದ ಹೊಂದಾಣಿಕೆ ವಿವರಗಳನ್ನು ಮಹಾಲೇಖಪಾಲರಿಗೆ ಹಾಗೂ ಆರ್ಥಿಕ ಇಲಾಖೆಗೆ ಕಳುಹಿಸಿ ಮಾಹಿತಿಗಾಗಿ ಪ್ರತಿಯನ್ನು ಈ ಕಚೇರಿಗೆ ಕಳುಹಿಸುವಂತೆ ಕೋರಿದೆ.

ಆದ್ಯತೆ ಮೇರೆಗೆ ಕ್ರಮವಹಿಸಿ ಇತ್ಯರ್ಥಗೊಳಿಸಲು ಕೋರಿದೆ.

ತಮ್ಮ ವಿಶ್ವಾಸಿ,

N. S. Gayathri devi 19/09/2023

**(ಎನ್.ಎಸ್. ಗಾಯಿತ್ರಿದೇವಿ)**
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ
ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

महालेखाकार (लेखा एवं हक)
का कार्यालय, कर्नाटका,
भारतीय लेखापरीक्षा तथा लेखा विभाग

सत्यमेव जयते

OFFICE OF THE
ACCOUNTANT GENERAL (A & E)
KARNATAKA
Indian Audit & Accounts Department

Prinson Varghese,
Deputy Accountant General(A/cs&VLC)

DO NO. AG(A&E)/VLCIX/Recon/ 153 07/09/2023

Dear Sir,

I wish to bring to your kind notice that this office has already been forwarded Statement of monthly Expenditure / Revenue statement for the month of 04/2023 & 05/2023 to the concerned CCO through E mail, under the Major head 0202,2202,2203 & 4202.

As per Art 346 of the KFC &Govt. order No.FD05/TFC/2004 dated 04/06-2006. The Competent Authority shall be responsible for effecting the reconciliation between the Departmental figures and with those booked in the Books of the Accountant General (A&E) & non-receipt of certificate or a statement of reconciliation will be reported to Government and will be communicated by Audit in the report of CAG of India.

IFA

In view of this, I am to request you to kindly look into the matter personally and ensure that the certificate of reconciliation is immediately sent to this office.

With regards,

Yours sincerely,

Prinson Varghese 7/9/2023

6

Sri. S.R.Umashankar, IAS
Additional Chief Secretary,
Education Department,
Room No. 645 A,
6th Floor, 2nd Phase, MS Building,
Bengaluru - 560001

Received on 13/09/2023

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:-ಕಾಶಿಇ/ಆಯವ್ಯಯ/ ಸುತ್ತೋಲೆ/ ಸಪ್ರದಕಾ/06/2021-22 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 15.11.2021

**:::: ಸುತ್ತೋಲೆ ::::**

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವೆಚ್ಚಗಳನ್ನು ಖಜಾನೆ-2ರಲ್ಲಿ ಸಮನ್ವಯೀಕರಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:-ಆಇ:01:ಟಿ.ಎಫ್.ಪಿ 2021 ದಿನಾಂಕ:29.10.2021

****

ಮೇಲ್ಕಂಡ ಸರ್ಕಾರದ ಸುತ್ತೋಲೆಯಂತೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳು (DDO) ಗಳು ಮಾಹೆವಾರು ಭರಿಸುವ ವೆಚ್ಚಗಳ ವರದಿ 62 (ಬಿ) ಯನ್ನು ಪರಿಶೀಲಿಸಿ ಖಜಾನೆ-2 ರಲ್ಲಿ ಸಮನ್ವಯೀಕರಿಸಲು ಅವಕಾಶವಿರುತ್ತದೆ. ಅದರಂತೆ ವೆಚ್ಚಗಳ ಸಮನ್ವಯಯೀಕರಣ ನಮೂನೆ ಗಳು/ ವರದಿಗಳನ್ನು ಸಿಸ್ಟಂನಲ್ಲಿ ಸೃಜಿಸಿ ಪ್ರತೀ ಮಾಹೆಯ 10ನೇ ತಾರೀಖಿನ ಒಳಗಾಗಿ ಲೆಕ್ಕ ಸಮನ್ವಯ (RECONCILATION) ಮಾಡಿ ಈ ಕಛೇರಿಗೆ ಸಲ್ಲಿಸುವುದು. ತಪ್ಪಿದ್ದಲ್ಲಿ ಡಿಡಿಒಗಳ ವೇತನ ಮತ್ತು ಇತರೆ ಬಿಲ್ಲುಗಳನ್ನು ತಡೆಹಿಡಿಯಲು ಉಲ್ಲೇಖಿತ ಆದೇಶದಲ್ಲಿ ಖಜಾನಾಧಿಕಾರಿಗಳಿಗೆ ಸೂಚಿಸಲಾಗಿದೆ.

**ನಿರ್ದೇಶಕರು,**
**ಕಾಲೇಜು ಶಿಕ್ಷಣ ಇಲಾಖೆ.**

**ಅಡಕ:**

1. ಸರ್ಕಾರಿ ಆದೇಶ ಸಂಖ್ಯೆ:ಆಇ:01:ಟಿ.ಎಫ್.ಪಿ 2021 ದಿನಾಂಕ: 29.10.2021- ಸುತ್ತೋಲೆಯ ಪ್ರತಿ
2. ಖಜಾನೆ-2ರಲ್ಲಿ ಕ್ರಮವಹಿಸಲು WORK FLOW CHART

**ಪ್ರತಿಯನ್ನು:**

1. ಇಲಾಖಾ ವ್ಯಾಪ್ತಿಯ ಎಲ್ಲಾ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ: ಅಗತ್ಯ ಕ್ರಮಕ್ಕಾಗಿ,
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ

180557720

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 01 ಟಿಎಫ್‌ಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ

ಬೆಂಗಳೂರು,ದಿನಾಂಕ:29-10-2021

## ಸುತ್ತೋಲೆ

ವಿಷಯ:- ಇಲಾಖಾ ವೆಚ್ಚಗಳ ಲೆಕ್ಕಗಳನ್ನು ಖಜಾನೆ-2 ರಲ್ಲಿ ಸಮನ್ವಯೀಕರಿಸುವ ಕುರಿತು.

****-****

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 346 ರಂತೆ ಸಾರ್ವಜನಿಕ ಸೇವೆಗಳಲ್ಲಿನ ವೆಚ್ಚದ ಪ್ರಗತಿಯನ್ನು ಗಮನಿಸುವುದು ಹಾಗೂ ವೆಚ್ಚವನ್ನು ಅನುದಾನ ನಿಯಂತ್ರಣ ಮಾಡುವ ಹೊಣೆಗಾರಿಕೆ ಆಯಾ ಸಕ್ಷಮ ಪ್ರಾಧಿಕಾರ ಮತ್ತು ನಿಯಂತ್ರಣಾಧಿಕಾರಿಗಳದ್ದಾಗಿರುತ್ತದೆ. ಸದರಿ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಪಾಲಿಸಬೇಕಾದ ವಿವರವಾದ ವಿಧಾನವನ್ನು ಆರ್ಥಿಕ ಸಂಹಿತೆಯಲ್ಲಿ ನಿಗದಿಗೊಳಿಸಲಾಗಿದೆ.

ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಸಿ 2004, ದಿನಾಂಕ:09.09.2004 ರಲ್ಲಿ ತಿಳಿಸಿರುವಂತೆ ಹಣ ಸೆಳೆಯುವ ಅಧಿಕಾರಿಗಳು(ಡಿಡಿಓ), ನಿಯಂತ್ರಣಾಧಿಕಾರಿಗಳು(ಸಿಒ) ಮತ್ತು ಮುಖ್ಯ ನಿಯಂತ್ರಣಾಧಿಕಾರಿಗಳು (ಸಿಸಿಒ) ರವರು ಲೆಕ್ಕಸಮನ್ವಯೀಕರಣಕ್ಕೆ ನಿಗಧಿಗೊಳಿಸಿರುವ ನಮೂನೆ-62(ಬಿ) (Register showing expenditure by Head of Accounts), ನಮೂನೆ 62(ಸಿ) (Broadsheet for watching receipt of account from disbursing officers), ನಮೂನೆ 62(ಡಿ) (Compilation sheet), ನಮೂನೆ 62(ಇ) consolidated account ಗಳನ್ನು ನಿರ್ವಹಿಸುವ ಕಾರ್ಯವಿಧಾನವನ್ನು ಮುಂದುವರೆಸಲಾಗಿದೆ. ರಾಜಸ್ವ ಮತ್ತು ವೆಚ್ಚದ ಇಲಾಖಾ ಲೆಕ್ಕಗಳನ್ನು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ.

ಪ್ರಸ್ತುತ ಅನುಕಲಿತ ಆರ್ಥಿಕ ನಿರ್ವಹಣಾ ವ್ಯವಸ್ಥೆ ಖಜಾನೆ-2 ಅನುಷ್ಠಾನದ ಹಿನ್ನೆಲೆಯಲ್ಲಿ ಸಮನ್ವಯೀಕರಣದ ನಮೂನೆ ಹಾಗೂ ವರದಿಗಳನ್ನು ಸಿದ್ಧಪಡಿಸುವ ಪರಿಷ್ಕೃತ ವಿಧಾನವನ್ನು ಸರ್ಕಾರದ ಸುತ್ತೋಲೆ ಸಂ:ಆಇ 02 ಟಿಎಫ್‌ಸಿ 2018, ದಿ:19.07.2018 ರ ಅನುಬಂಧದಲ್ಲಿ ನೀಡಲಾಗಿದೆ. ಖಜಾನೆ-2 ಅನುಷ್ಠಾನಗೊಂಡಿರುವ ಇಲಾಖೆಗಳು ಲೆಕ್ಕಸಮನ್ವಯೀಕರಣಕ್ಕಾಗಿ ಸದರಿ ವಿಧಾನವನ್ನು ಅನುಸರಿಸಲು ಹಾಗೂ ವೆಚ್ಚಗಳ ಸಮನ್ವಯೀಕರಣದ ನಮೂನೆಗಳು / ವರದಿಗಳನ್ನು ಸಿಸ್ಟಂ ನಲ್ಲಿ ಸೃಜಿಸಿ ಲೆಕ್ಕಸಮನ್ವಯೀಕರಣವನ್ನು ನಿಗದಿತವಾಗಿ ನಿರ್ವಹಿಸುವಂತೆ ತಮ್ಮ ಅಧೀನದ ಎಲ್ಲಾ ಇಲಾಖಾ ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಖಜಾನೆ-2 ರಲ್ಲಿ ಮ್ಯಾಪಿಂಗ್ ಆಗಿರುವ ಡಿಡಿಓ ಗಳು ಭರಿಸುವ ವೆಚ್ಚಗಳನ್ನು ಸಮನ್ವಯೀಕರಿಸಲು ಸಹಾಯಕವಾಗುವಂತೆ ನಮೂನೆ 62(ಬಿ), ನಿಯಂತ್ರಣಾಧಿಕಾರಿಗಳಿಗೆ ನಮೂನೆ 62(ಸಿ) ಮತ್ತು 62(ಡಿ) ಗಳನ್ನು ಮತ್ತು ಮುಖ್ಯ ನಿಯಂತ್ರಣಾಧಿಕಾರಿಗಳಿಗೆ ನಮೂನೆ 62(ಇ) ಸಿಸ್ಟಂ ನಲ್ಲಿ ಸೃಜಿಸಲು ಖಜಾನೆ-2 ರಲ್ಲಿ ಅವಕಾಶವಿರುತ್ತದೆ.

ಪ್ರಸ್ತುತ ಪಿಆರ್‌ಐ ಇಲಾಖೆಯು ಸೇರಿದಂತೆ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಖಜಾನೆ-2ನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದರಿಂದ ದಿ:19/07/2018ರ ಸುತ್ತೋಲೆಯಲ್ಲಿ ತಿಳಿಸಿರುವ ಪರಿಷ್ಕೃತ ವಿಧಾನದಂತೆ ವೆಚ್ಚಗಳ ಸಮನ್ವಯೀಕರಣದ ನಮೂನೆಗಳು / ವರದಿಗಳನ್ನು ಸಿಸ್ಟಂ ನಲ್ಲಿ ಸೃಜಿಸಿ ಲೆಕ್ಕಸಮನ್ವಯೀಕರಣವನ್ನು

ಕೆಳಗೆ ತಿಳಿಸಿರುವ ಕಾಲಮಿತಿಯೊಳಗೆ ನಿರ್ವಹಿಸುವಂತೆ ತಮ್ಮ ಅಧೀನದ ಎಲ್ಲಾ ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ಸೂಚಿಸಲಾಗಿದೆ. ತಪ್ಪಿದಲ್ಲಿ ಡಿಡಿಓ ಗಳ ಮುಂದಿನ ವೇತನೇತರ ಬಿಲ್ಲುಗಳನ್ನು ತಡೆ ಹಿಡಿಯಲು ಖಜಾನಾಧಿಕಾರಿಗಳಿಗೆ ಸೂಚಿಸಲಾಗಿದೆ.


| SL No. | Activity | Officer responsible | Timeline |
|---|---|---|---|
| 1 | 62(B) Expenditure Statement generation and reconciliation | DDO | 10th of the following month |
| 2 | 62(C) Broad Sheet and 62(D) compilation sheet generation and reconciliation | CO | 15th of the following month |
| 3 | 62(E) reconciliation | CCO | 20th of the following month |


29/10/2021
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ಆರ್ಥಿಕ ಇಲಾಖೆಯ ಸರ್ಕಾರದ ವಿಶೇಷಾಧಿಕಾರಿಗಳು/ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
11. ಹೆಚ್ಚುವರಿ ನಿರ್ದೇಶಕರು, 5 ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
12. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು.
13. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.

**ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳು (DDO) ಗಳು ಮಾಹೆವಾರು ಭರಿಸುವ ವೆಚ್ಚಗಳ ವರದಿ 62 (ಬಿ) ಯನ್ನು ಪರಿಶೀಲಿಸಿ ಖಜಾನೆ-2 ರಲ್ಲಿ ಸಮ ಸಮನ್ವಯೀಕರಿಸುವ ಕುರಿತು**




**ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಹಣ ಸೆಳೆಯುವ ಅಧಿಕಾರಿಗಳು ಡಿಡಿಓಗಳು ಲೆಕ್ಕಸಮನ್ವಯೀಕರಣಕ್ಕೆ ನಿಗಧಿಗೊಳಿಸಿರುವ ನಮೂನೆ-62(ಬಿ)ಯನ್ನು ಖಜಾನೆ-2 ಮೂಲಕ EXPENDITURE RECONCILIATION WORKLIST 62Bಯನ್ನು ನಿಯಮಾನುಸಾರ ಪರಿಶೀಲಿಸಿ ತಾಳೆ ಮಾಡಿ ಹೊಂದಾಣಿಕೆಯಾದ ನಂತರ APPROVE ಮಾಡಲು ಸೂಚಿಸಲಾಗಿದೆ.**

**DDO LOGIN**

↓

**ACCOUNT COMPILATION & RECONCILIATION**

↓

**TRANSACTIONS**

↓

**EXPENDITURE RECONCILIATION**

↓

**EXPENDITURE RECONCILIATION WORKLIST 62B**

↓

**VERIFY AND APPROVE**